ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕದಲ್ಲಿ ಸರಕಾರೀ ನಿಯಂತ್ರಣದಲ್ಲಿರುವ ದೇವಾಲಯಗಳ ಸಂಖ್ಯೆ ಎಷ್ಟು? ಇವುಗಳ ತಲಾ ಆದಾಯ ಮತ್ತು ವೆಚ್ಚವೆಷ್ಟು?

ಆ) ಈ ದೇವಾಲಯಗಳಲ್ಲಿ ಎಲ್ಲರಿಗೂ ಮುಕ್ತ ಪ್ರದೇಶವಿರುವ ದೇವಾಲಯಗಳ ಸಂಖ್ಯೆ ಎಷ್ಟು ಹಾಗೂ ಪ್ರತಿ ಕ್ಷೇತ್ರಗಳಿಗೂ ಬರುವ ವಾರ್ಷಿಕ ಭಕ್ತಾದಿಗಳ ಸಂಖ್ಯೆ ಎಷ್ಟು ಹಾಗೂ ಭಕ್ತಾದಿಗಳ ಸಂಖ್ಯೆಯನ್ನು ಗುರುತಿಸುವ ಮಾಪನ ಯಾವುದು?

ಇ) ಪ್ರತಿ ವರ್ಷ 8-10 ಲಕ್ಷ ಜನ ಸೇರುವ ಮೈಲಾರು ಕ್ಷೇತ್ರದಲ್ಲಿ ಸ್ನಾನ ಘಟ್ಟಗಳನ್ನೇನಾದರೂ ನಿರ್ಮಿಸಲಾಗಿದೆಯೇ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು):

ಅ) ದೇವಾಲಯಗಳ ಸಂಖ್ಯೆ: 41366 ಆದಾಯ ರೂ. 15,02,89, 083-00 ವೆಚ್ಚ ರೂ. 12,23,33,596-00

ಆ) ಮುಜರಾಯಿ ಇಲಾಖೆಯ ನಿಯಂತ್ರಣದಲ್ಲಿರುವ ಎಲ್ಲಾ ದೇವಾಲಯಗಳಿಗೆ ಮುಕ್ತ ಪ್ರದೇಶವಿದೆ. ಮಾಪನ ಇಲ್ಲದಿರುವುದರಿಂದ, ಭಕ್ತಾದಿಗಳ ಸಂಖ್ಯೆಯನ್ನು ನಿಖರವಾಗಿ ತಿಳಿಸುವುದು ಕಷ್ಟ ಸಾಧ್ಯ.

ಇ) ಇಲ್ಲ.

ಕೃಷಿ ಇಲಾಖೆಯ ವಾಹನಗಳ ಹರಾಜು

300 - ಶ್ರೀ ಉಮಾಪತಿ (ಹೊಳಲ್ಕೆರೆ): ಮಾನ್ಯ ಕೃಷಿ ಮತ್ತು ತೋಟಗಾರಿಕೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೃಷಿ ಇಲಾಖೆಯಲ್ಲಿ ಹಾಲಿ ಇರುವ ವಾಹನಗಳ ಸಂಖ್ಯೆ ಎಷ್ಟು?

ಆ) ಆ ಪೈಕಿ ಈಗ ಚಾಲ್ತಿಯಲ್ಲಿರುವ ಹಾಗೂ ದುರಸ್ತಿಯಲ್ಲಿರುವ ವಾಹನಗಳ ಸಂಖ್ಯೆ ಎಷ್ಟು?

ಇ) ದುರಸ್ತಿಯಲ್ಲಿರುವ ವಾಹನಗಳನ್ನು ಹರಾಜು ಮಾಡಲಾಗುವುದೇ ಅಥವಾ ದುರಸ್ತಿ ಮಾಡಿಸಲಾಗುವುದೇ?

ಈ) ಕೃಷಿ ಇಲಾಖೆಗೆಂದೇ ವಾಹನಗಳನ್ನು ಖರೀದಿಸುವ ಪ್ರಸ್ತಾವನೆ ಏನಾದರೂ ಇದೆಯೇ?

ಶ್ರೀ ಜಿ. ಪುಟ್ಟಸ್ವಾಮಿಗೌಡ (ಕೃಷಿ ಮತ್ತು ತೋಟಗಾರಿಕೆ ಸಚಿವರು):

ಅ) 554

ಆ) ಚಾಲ್ತಿಯಲ್ಲಿ 450 ಹಾಗೂ ದುರಸ್ತಿಯಲ್ಲಿ 104 ವಾಹನಗಳು ಇರುತ್ತವೆ..

ಇ) ಅನೇಕ ವರ್ಷಗಳ ಹಳೆಯದಾದ ಮತ್ತು ಆರ್ಥಿಕವಾಗಿ ಸರ್ಕಾರಕ್ಕೆ ಲಾಭದಾಯಕವಾಗಿ ಚಲಿಸದೇ ಅನುಪಸ್ಥಿತಿಯಲ್ಲಿರುವ ವಾಹನಗಳನ್ನು ನಿಯಮನುಸಾರ ವಿಲೇವಾರಿ ಮಾಡಲಾಗುತ್ತಿದೆ ಮತ್ತು ಲಾಭದಾಯಕವಾಗಿ ಓಡಾಡಬಲ್ಲ ವಾಹನಗಳನ್ನು ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಮೇರೆಗೆ ದುರಸ್ತಿಪಡಿಸಿ ಉಪಯೋಗಿಸಲಾಗುವುದು.

ಈ) ಪ್ರಸಕ್ತ ಸಾಲಿನಲ್ಲಿ ರಾಷ್ಟ್ರೀಯ ಕೃಷಿ ವಿಸ್ತರಣಾ ಯೋಜನೆ-2ರ ಅಡಿಯಲ್ಲಿ ಕೆಲವು ವಾಹನಗಳನ್ನು ಖರೀದಿಸುವ ಬಗ್ಗೆ ಸರ್ಕಾರದಲ್ಲಿ ಪರಿಶೀಲಿಸಲಾಗುತ್ತಿದೆ.

ಕೊಳಚೆ ನಿರ್ಮೂಲನಾ ಮಂಡಲಿಯ ಆಶ್ರಯದಲ್ಲಿ ಕಟ್ಟುತ್ತಿರುವ ಮನೆಗಳ ಸಂಖ್ಯೆ.

760 - ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ): ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ